# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ

# PILIKULA DEVELOPMENT AUTHORITY

ಆಡಳಿತ ಕಚೇರಿ: ಮೂಡುಶೆಡ್ಡೆ, ಮಂಗಳೂರು–575028, ದೂರವಾಣಿ: 0824–2263565, ಇ-ಮೇಲ್:pilikula96@gmail.com, ವೆಬ್‌ಸೈಟ್: www.pilikula.com

Administrative Office: Moodushedde, Mangaluru-575028, Ph: 0824-2263565, e-mail:pilikula96@gmail.com, website: www.pilikula.com


ನಂ.ಪಿಡಿಎ(2).ಸಿಆರ್.21/ವಾಹನ/2021–22 ದಿ:02–07–2022

## ಟೆಂಡರ್ ಅಧಿಸೂಚನೆ

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಡಳಿತ ಕಛೇರಿ ಹಾಗೂ ವಿಜ್ಞಾನ ಕೇಂದ್ರದ ಉಪಯೋಗಕ್ಕಾಗಿ 2018 ಹಾಗೂ ನಂತರದ ಮಾಡೆಲಿನ ಹವಾ ನಿಯಂತ್ರಿತ 1100cc – 1500ccವರೆಗಿನ ಸಾಮರ್ಥ್ಯದ ಟೂರಿಸ್ಟ್ ಪರವಾನಿಗೆಯ ಎರಡು ವಾಹನವನ್ನು ಬಾಡಿಗೆ ನೆಲೆಯಲ್ಲಿ ಒಂದು ವರ್ಷದ ಅವಧಿಗೆ ನೀಡಲು ಆಸಕ್ತ ವಾಹನ ಮಾಲಿಕರಿಂದ ದ್ವಿಲಕೋಟೆ (Two cover) ವಿಧಾನದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರನ್ನು ಆನ್‌ಲೈನ್ ಮುಖಾಂತರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ಸಲ್ಲಿಸತಕ್ಕದ್ದು.

## ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ

| | | | |
|---|---|---|---|
| 1. | ಭರ್ತಿ ಮಾಡಿದ ಇ-ಟೆಂಡರ್ ಅನ್ನು ಅಂತರ್ಜಾಲದ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ | : | 16.07.2022 ಸಂಜೆ 05.30 ಗಂಟೆ |
| 2. | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | : | 19.07.2022 ಸಂಜೆ 11:00 ಗಂಟೆ |
| 3. | ಆರ್ಥಿಕ ಬಿಡ್ ತೆರೆಯುವ ದಿನಾಂಕ | : | 20.07.2022 ಸಂಜೆ 11:00 ಗಂಟೆ |

## ಸಂಕ್ಷಿಪ್ತ ವಿವರ

| | |
|---|---|
| ಕೆಲಸದ ಹೆಸರು | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಡಳಿತ ಕಛೇರಿ ಹಾಗೂ ವಿಜ್ಞಾನ ಕೇಂದ್ರದ ಉಪಯೋಗಕ್ಕಾಗಿ 2018 ಹಾಗೂ ನಂತರದ ಮಾಡೆಲಿನ ಹವಾ ನಿಯಂತ್ರಿತ 1100cc – 1500ccವರೆಗಿನ ಸಾಮರ್ಥ್ಯದ ಟೂರಿಸ್ಟ್ ಪರವಾನಿಗೆಯ ಎರಡು ವಾಹನವನ್ನು ಬಾಡಿಗೆ ನೆಲೆಯಲ್ಲಿ ಪಡೆಯುವ ಕುರಿತು |
| ಅಂದಾಜು ವೆಚ್ಚ | ರೂ.80,000.00 ಮಾಸಿಕ, ತೆರಿಗೆ ಪ್ರತ್ಯೇಕ |
| ನಿಗಧಿಪಡಿಸಿದ ಇ.ಎಮ್.ಡಿ | ರೂ.24,000.00 |

ಆಯುಕ್ತರು

**ಟೆಂಡರ್ ಷರತ್ತು ಮತ್ತು ನಿಬಂಧನೆಗಳು:**

1. ಕಚೇರಿಗೆ ನೀಡುವ ಎ.ಸಿ ಹೊಂದಿರುವ ವಾಹನವು ಸುಸ್ಥಿತಿಯಲ್ಲಿದ್ದು 2018ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. ಸಂಬಂಧಿಸಿದ ದಾಖಲೆ ಸಲ್ಲಿಸಬೇಕು.
2. ಟೆಂಡರ್‌ದಾರರು ಜಿಎಸ್‌ಟಿ ನಂಬರ್ ಹೊಂದಿರುವ ಬಗ್ಗೆ ದಾಖಲೆ ಸಲ್ಲಿಸಬೇಕು.
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮಗಳು 2000 ರನ್ವಯ ಟೆಂಡರ್ ಅರ್ಜಿಯನ್ನು ದಿ:16-07-2022ರ ಸಂಜೆ 05:30ಗಂಟೆಯೊಳಗೆ www.eproc.karnataka.gov.in ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:19-07-2022 ರಂದು ಸಂಜೆ 11.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ:20-07-2022 ಸಂಜೆ 11:00 ಗಂಟೆಗೆ.
4. ಅಂಗೀಕೃತವಾಗದ ಇ-ಟೆಂಡರ್‌ನ ಇ.ಎಂ.ಡಿ ಮೊತ್ತವನ್ನು ಹಿಂದಿರುಗಿಸಲಾಗುವುದು. ಟೆಂಡರ್ ಫಾರಂ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
5. ಯಶಸ್ವಿ ಟೆಂಡರ್‌ದಾರರು ಚಾಲ್ತಿ ಅವಧಿಯೊಳಗೆ ಸೂಚಿತ ದರಗಳಿಗೆ ಒಪ್ಪದಿದ್ದಲ್ಲಿ ಅಥವಾ ಯಾವುದೇ ಷರತ್ತುಗಳು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
6. ತಾಂತ್ರಿಕ ಬಿಡ್ಡನ್ನು ಮೊದಲ ಸುತ್ತಿನಲ್ಲಿ ಪರಿಶೀಲಿಸಲಾಗುವುದು. ಪ್ರಾಧಿಕಾರ ಸೂಚಿಸಿದ ಎಲ್ಲಾ ಅಗತ್ಯತೆಯನ್ನು ಪೂರೈಸಿದಲ್ಲಿ ಮಾತ್ರ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು.
7. ಟೆಂಡರ್‌ದಾರರು ಇ.ಎಂ.ಡಿ ಮೊತ್ತ ರೂ.24,000/-(ರೂಪಾಯಿ ಇಪ್ಪತ್ತ ನಾಲ್ಕು ಸಾವಿರ ಮಾತ್ರ)ನ್ನು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾವತಿಸುವುದು. ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಅಂತರ್ಜಾಲದ ಮೂಲಕ ಪಾವತಿಸುವುದು.
8. ವಾಹನ ಮತ್ತು ವಾಹನ ಚಾಲಕರು ಸದಾ ಕಚೇರಿ ಉಪಯೋಗಕ್ಕೆ ದೊರೆಯುವಂತಿರಬೇಕು.
9. ವಾಹನಕ್ಕೆ ಬಳಸುವ ಇಂಧನ ಮತ್ತು ರಿಪೇರಿ, ಲೈಸನ್ಸ್ ಚಾರ್ಜು,ತೆರಿಗೆ, ಟೋಲ್ ಫೀ, ಹೊರ ರಾಜ್ಯಕ್ಕೆ ಪ್ರಯಾಣಿಸುವಾಗ ತೆರಿಗೆ, ವಿಮೆ ಹಾಗೂ ವಾಹನ ಚಾಲಕರ ವೇತನ, ದಿನಭತ್ಯೆಗಳನ್ನು ಮಾಲೀಕರು/ ಸಂಸ್ಥೆಯವರು ಭರಿಸತಕ್ಕದ್ದು.
10. ಪ್ರತಿ ಮಾಹೆ ಅಂತ್ಯಗೊಂಡ ನಂತರ ಲಾಗ್ ಬುಕ್‌ನ ಪ್ರತಿ, ಬಿಲ್ಲನ್ನು ಸಲ್ಲಿಸಿದ ನಂತರ ಹಣ ಸಂದಾಯ ಮಾಡಲಾಗುವುದು.
11. ಒಂದು ವೇಳೆ ತಿಂಗಳ ಮಧ್ಯದಲ್ಲಿ ವಾಹನವನ್ನು ಬಾಡಿಗೆಗೆ ಬಿಡದೆ ವಾಹನವನ್ನು ವಾಪಾಸ್ಸು ಪಡೆದ ಪಕ್ಷದಲ್ಲಿ ಆ ಮಾಹೆಯ ಬಾಡಿಗೆಯನ್ನು ಪಾವತಿಸಲು ಬರುವುದಿಲ್ಲ.
12. ವಾಹನ ಮಾಲೀಕರು ಮತ್ತು ಚಾಲಕರು ಸ್ಥಳೀಯರಾಗಿರಬೇಕು ಹಾಗೂ ಒಂದೇ ವಾಹನವನ್ನು ಒದಗಿಸಬೇಕು. ಕರಾರು ಪ್ರಕಾರ ಒಂದು ಸಾರಿ ವಾಹನವನ್ನು ಪ್ರಾಧಿಕಾರಕ್ಕೆ ನೀಡಿದ ಮೇಲೆ ಯಾವುದೇ ಕಾರಣಕ್ಕೂ ಇತರೆಯವರಿಗೆ ಬಾಡಿಗೆಗೆ ವಾಹನವನ್ನು ಉಪಯೋಗಿಸಲು ಅವಕಾಶಗಳಿರುವುದಿಲ್ಲ.
13. ಈ ಗುತ್ತಿಗೆಯು ಟೆಂಡರ್ ಅಂಗೀಕರಿಸಿದ ದಿನಾಂಕದಿಂದ 1 ವರ್ಷ ಅಥವಾ ಈ ಆದೇಶವನ್ನು ರದ್ದುಪಡಿಸಿದ ದಿವಸ ಯಾವುದು ಮೊದಲು ಬರುವುದು ಅಲ್ಲಿಯವರೆಗೆ ಇರುತ್ತದೆ. ಅಗತ್ಯವೆಂದು ಕಂಡು ಬಂದಲ್ಲಿ ಹಾಗೂ ಸೇವೆಯು ತೃಪ್ತಿಕರವಾದಲ್ಲಿ ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರ ವಿವೇಚನೆಯಲ್ಲಿ ಮುಂದುವರಿಸಲು ಅವಕಾಶವಿರುತ್ತದೆ. ಆದರೆ, ಗುತ್ತಿಗೆಯನ್ನು ಮುಂದುವರಿಸಲು ಪ್ರೇರಣೆ ನೀಡಲು ಗುತ್ತಿಗೆದಾರರಿಗೆ ಅವಕಾಶವಿರುವುದಿಲ್ಲ.

14. ಈ ಕಛೇರಿಯಿಂದ ಆದೇಶ ನೀಡಿದ ತಕ್ಷಣ ಯಶಸ್ವಿ ಟೆಂಡರ್‌ದಾರರ ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗುವುದು.
15. ವಾಹನ ದುರಸ್ತಿಗೆ ಬಂದಲ್ಲಿ ಅಥವಾ ಇನ್ಯಾವುದೇ ಕಾರಣಕ್ಕೆ ಸದರಿ ವಾಹನವನ್ನು ಪೂರೈಸಲು ಆಗದಿದ್ದರೆ ಬೇರೆ ವಾಹನ ವ್ಯವಸ್ಥೆ ಮಾಡುವುದು ವಾಹನ ಮಾಲೀಕರ ಜವಾಬ್ದಾರಿ ಆಗಿರುತ್ತದೆ.
16. ವಾಹನದ ಗೈರು ಹಾಜರಿ ಅವಧಿಯಲ್ಲಿ ಪ್ರಾಧಿಕಾರದಿಂದ ನಿರ್ವಹಿಸಬೇಕಾದ ಕೆಲಸಗಳಿಗೆ ಬದಲಿ ವಾಹನವನ್ನು ಮಾಲಿಕರು ನೀಡದೇ ಇದ್ದು ಪ್ರಾಧಿಕಾರದ ವತಿಯಿಂದ ತೆಗೆದುಕೊಂಡಲ್ಲಿ ತಗಲಿದ ನಿಜವಾದ ಬಾಡಿಗೆಯನ್ನು ಗುತ್ತಿಗೆದಾರರಿಂದ ವಸೂಲಿ ಮಾಡಲಾಗುವುದು ಅಥವಾ ಬಿಲ್ಲಿನಲ್ಲಿ ಕಡಿತಗೊಳಿಸಲಾಗುವುದು. ಈ ರೀತಿ 1–2 ದಿವಸಗಳಿಗಿಂತ ಹೆಚ್ಚಿಗೆ ವಾಹನವನ್ನು ಒದಗಿಸಲು ವಿಫಲರಾದಲ್ಲಿ ಯಾವುದೇ ಕಾರಣ ನೀಡದೆ ಗುತ್ತಿಗೆದಾರರ ಹೊಣೆಗಾರಿಕೆಯಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.
17. ವಾಹನದ ಸೇವೆಯು ಅತೃಪ್ತಿಕರವಾದಲ್ಲಿ ಯಾವುದೇ ಕಾರಣ ನೀಡದೆ ಆದೇಶವನ್ನು ರದ್ದುಗೊಳಿಸಿ, ಬದಲಿ ವ್ಯವಸ್ಥೆ ಮಾಡಿಕೊಳ್ಳಲಾಗುವುದು ಹಾಗೂ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
18. ವಾಹನದ ಆರ್.ಸಿ ಪುಸ್ತಕದ ಪ್ರತಿ, ವಿಮಾ ಕಂತುಗಳನ್ನು ತುಂಬಿದ ಪ್ರತಿಗಳನ್ನು ಸಲ್ಲಿಸತಕ್ಕದ್ದು.
19. ಟೆಂಡರನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಹೊಂದಿರುತ್ತಾರೆ.
20. ಪ್ರತಿ ಬಿಲ್ಲಿನಲ್ಲಿ ಟಿಡಿಎಸ್ ಹಾಗೂ ಜಿಎಸ್‌ಟಿಗಳನ್ನು ನಿಯಮಾನುಸಾರ ಕಟಾಯಿಸಲಾಗುವುದು.
21. ಸರ್ಕಾರದ ಪರಿಷ್ಕೃತ ಆದೇಶದಲ್ಲಿ ಹವಾ ನಿಯಂತ್ರಿತ (ಎ.ಸಿ) ವಾಹನಗಳಿಗೆ ಗರಿಷ್ಠ ರೂ.40,000.00 + ತೆರಿಗೆ ಬಾಡಿಗೆ ದರ ನಿಗಧಿಪಡಿಸಿದೆ ಮತ್ತು 2500 ಕಿ.ಮೀ. ನಂತರದ ಪ್ರತೀ. ಕಿ.ಮೀ.ಗೆ ರೂ.12/– ನಿಗಧಿಪಡಿಸಿದೆ.
22. ಯಾವುದೇ ಇಲಾಖೆಯಲ್ಲಿ ಕಪ್ಪು ಪಟ್ಟಿಗೆ ಸೇರ್ಪಡೆಯಾಗಿಲ್ಲದಿರುವ ಬಗ್ಗೆ ರೂ.50/–ಗಳ ಛಾಪಾಕಾಗದಲ್ಲಿ ನೋಟರಿಯಿಂದ ದೃಢೀಕರಿಸಿದ ಅಫಿಡೆವಿಟ್ ಸಲ್ಲಿಸುವುದು.
23. ಸೇವಾ ಅವಧಿಯಲ್ಲಿ ಅಪಘಾತ ಸಂಭವಿಸಿದಲ್ಲಿ ಮಾಲೀಕರೆ ಜವಾಬ್ದಾರರು. ಅಪಘಾತದ ಬಗ್ಗೆ ಪ್ರಾಧಿಕಾರದ ಯಾವುದೇ ರೀತಿಯಿಂದ ಹೊಣೆಗಾರಿಕೆ ಇರುವುದಿಲ್ಲ. ಎಲ್ಲಾ ರೀತಿಯ ಕಾನೂನು ವ್ಯವಹಾರಗಳಿಗೆ ವಾಹನದ ಮಾಲೀಕರೇ ಜವಾಬ್ದಾರರಾಗಿರುತ್ತಾರೆ
24. ವಾಹನದ ಚಾಲಕರು ಡ್ರೈವಿಂಗ್ ಪರವಾನಗಿ ಹೊಂದಿರಬೇಕು ಮತ್ತು ಡ್ರೈವಿಂಗ್‌ಗೆ ಸಂಬಂಧಿಸಿದ ಎಲ್ಲಾ ಅಗತ್ಯ ದಾಖಲೆ ನೀಡಬೇಕು.
25. ಯಾವುದೇ ಕಾರಣಗಳನ್ನು ನೀಡದೆ ಭಾಗಶ: ಅಥವಾ ಪೂರ್ಣವಾಗಿ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾಯ್ದಿರಿಸಿಕೊಂಡಿರುತ್ತದೆ.
26. ಯಶಸ್ವಿ ಟೆಂಡರ್‌ದಾರರು ಆದೇಶ ಸ್ವೀಕರಿಸಿದ 15 ದಿವಸಗಳೊಳಗಾಗಿ ರೂ.100/–ಗಳ ಛಾಪಾ ಕಾಗದವನ್ನು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಸಲ್ಲಿಸಿ ಟೆಂಡರ್ ನಿಬಂಧನೆಗಳನ್ನು ಒಪ್ಪಿ ಸಾಕ್ಷಿದಾರರ ಸಮ್ಮುಖದಲ್ಲಿ ಕರಾರು ನಿರ್ವಹಿಸಿಕೊಳ್ಳಬೇಕು.
27. ಯಶಸ್ವಿ ಟೆಂಡರ್‌ದಾರರು ಒಟ್ಟು ಟೆಂಡರ್ ಮೊತ್ತದ ಶೇ.5 ರಷ್ಟು ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿಯನ್ನು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರ ಹೆಸರಿಗೆ ತೆಗೆದು ಕಛೇರಿಗೆ ಸಲ್ಲಿಸತಕ್ಕದ್ದು. ಸದರಿ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
28. ಟೆಂಡರ್ ಅಂದಾಜು ಮೊತ್ತಕ್ಕೆ ಹಾಗೂ ಆರ್ಥಿಕ ಬಿಡ್ಡಿನಲ್ಲಿ ನಮೂದಿಸಿದ ಮೊತ್ತಕ್ಕೆ ಇರುವ ವ್ಯತ್ಯಾಸದ (Imbalance Tender) ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರ ಹೆಸರಿನಲ್ಲಿ ಡಿ.ಡಿಯನ್ನು ಪಡೆದು ಸಲ್ಲಿಸಬೇಕು. ಟೆಂಡರ್ ಅವಧಿ ಪೂರ್ಣಗೊಂಡ ನಂತರ ಸಲ್ಲಿಸಲಾದ ಮೊತ್ತವನ್ನು ಹಿಂದಿರುಗಿಸಲಾಗುವುದು. ಸದರಿ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

29. ವಾಹನವನ್ನು ಪೂರ್ತಿ ಸಂಸ್ಥೆಯ ಅಧೀನದಲ್ಲಿ ಅದರ ಉಪಯೋಗಕ್ಕೆ ವಹಿಸಿಕೊಡ ತಕ್ಕದ್ದು. ಅಗತ್ಯವಿದ್ದಲ್ಲಿ ರಾತ್ರಿ ವೇಳೆಯಲ್ಲಿ ಕೂಡಾ ನೀಡಬೇಕು. ವಾರದ ರಜೆ ಇರುವುದಿಲ್ಲ.

30. ಯಾವುದೇ ದಾವೆಗಳಿಗೆ ಒಳಪಟ್ಟ ಮತ್ತು ವಿರೂಪಗೊಂಡ ವಾಹನವನ್ನು ಬಾಡಿಗೆಗೆ ನೀಡಲು ಅವಕಾಶವಿರುವುದಿಲ್ಲ.

31. ಪ್ರಾಧಿಕಾರದಿಂದ ವಾಹನದ ಉಪಯೋಗದ ಬಗ್ಗೆ ಕಾಲಕಾಲಕ್ಕೆ ನೀಡಲಾಗುವ ಸೂಚನೆಗಳನ್ನು ಪಾಲಿಸಬೇಕು ಹಾಗೂ ಕಛೇರಿಯ ಪೂರ್ಣ ಬಳಕೆಗೆ ವಾಹನವು ಚಾಲಕರೊಂದಿಗೆ ಲಭ್ಯವಾಗಬೇಕು.

32. ಆರ್ಥಿಕ ಬಿಡ್ಡಿನಲ್ಲಿ ಒಂದಕ್ಕಿಂತ ಹೆಚ್ಚು ಸಮಾನ ಬಿಡ್ಡು ದರಗಳು ಅರ್ಹತೆಗೆ ಒಳಪಟ್ಟಲ್ಲಿ ಯಶಸ್ವಿ ಬಿಡ್ಡುದಾರರನ್ನು ಬಿಡ್ಡುದಾರರ ಸಮಕ್ಷಮದಲ್ಲಿ ಲಾಟ್ ತೆಗೆಯುವ ಮೂಲಕ ನಿರ್ಧರಿಸಲಾಗುವುದು.

ಆಯುಕ್ತರು
ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
ಮೂಡುಶೆಡ್ಡೆ, ಮಂಗಳೂರು

## ತಾಂತ್ರಿಕ ಬಿಡ್ – ನಮೂನೆ 1

| ಕ್ರ.ಸಂ | ವಿವರಗಳು | ಲಗತ್ತು |
|---|---|---|
| 1. | ಟೆಂಡರ್ ಅರ್ಜಿ ಸಲ್ಲಿಸುವವರ ಪೂರ್ಣ ಹೆಸರು, ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಇ–ಮೇಲ್ | |
| 2. | ವಾಹನದ ಆರ್.ಸಿ.ಪುಸ್ತಕದ ಪ್ರತಿ | |
| 3. | ವಿಮಾ ಕಂತುಗಳನ್ನು ತುಂಬಿದ ಪ್ರತಿ | |
| 4. | ವಾಹನ ಚಾಲಕರ ಡ್ರೈವಿಂಗ್ ಪರವಾನಿಗೆ, ಡ್ರೈವಿಂಗ್‌ಗೆ ಸಂಬಂಧಿಸಿದ ಎಲ್ಲಾ ಅಗತ್ಯ ದಾಖಲೆ | |
| 5. | ವಿಮೆ ಪಾವತಿ ಪತ್ರ ಚಾಲ್ತಿಯಲ್ಲಿರುವ ಬಗ್ಗೆ ದಾಖಲೆ | |
| 6. | ಜಿ.ಎಸ್.ಟಿ. ನೋಂದಣಿ ದೃಡ ಪತ್ರ | |
| 7. | ಪಾನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್‌ನ ಪ್ರತಿ | |
| 8. | ವಾಹನದ ಹೊಗೆ ನಿಯಂತ್ರಣ ಪ್ರಮಾಣ ಪತ್ರ ಚಾಲ್ತಿಯಲ್ಲಿರುವ ಬಗ್ಗೆ ದಾಖಲೆ | |
| 9. | ವಾಹನವು ಟೂರಿಸ್ಟ್ ಪರ್ಮಿಟ್, ಹಳದಿ ಫಲಕ ಹೊಂದಿರುವ ಬಗ್ಗೆ ದಾಖಲೆ | |
| 10. | ಯಾವುದೇ ಇಲಾಖೆಯಲ್ಲಿ ಕಪ್ಪು ಪಟ್ಟಿಗೆ ಸೇರ್ಪಡೆಯಾಗಿಲ್ಲದಿರುವ ಬಗ್ಗೆ ರೂ.50/– ಛಾಪಾ ಕಾಗದದಲ್ಲಿ ನೋಟರಿಯಿಂದ ದೃಢೀಕರಿಸಿದ ಅಫಿಡೆವಿಟ್ | |
| 11. | ಇ.ಎಂ.ಡಿ. ಠೇವಣಿ ಹಣ ರೂ.24,000/– ಪಾವತಿಸಿರುವ ಬಗ್ಗೆ | |

ಟೆಂಡರ್ ಪ್ರಕಟನೆಯಲ್ಲಿ ತಿಳಿಸಿರುವ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಅರ್ಜಿ ಸಲ್ಲಿಸಿರುತ್ತೇನೆ. ಟೆಂಡರನ್ನು ಒಪ್ಪುವುದು/ ತಿರಸ್ಕರಿಸುವುದು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಬಿಟ್ಟಿದ್ದು ಎಂಬುದನ್ನು ತಿಳಿದುಕೊಂಡಿರುತ್ತೇನೆ ಹಾಗೂ ಪ್ರಾಧಿಕಾರದ ಅಂತಿಮ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ.

ಸ್ಥಳ :
ದಿನಾಂಕ:

ಟೆಂಡರ್‌ದಾರರ ಸಹಿ

## <u>ಆರ್ಥಿಕ ಬಿಡ್ – ನಮೂನೆ 2</u>

| ಕ್ರ.ಸಂ | ಹವಾ ನಿಯಂತ್ರಿತ ವಾಹನ (AC) | ದರ (ರೂ.ಗಳಲ್ಲಿ) |
|---|---|---|
| 1. | ಎರಡು ವಾಹನಗಳಿಗೆ ಮಾಸಿಕ 2,500.00 ಕಿ.ಮೀಗೆ | |
| 2. | 2,500 ಕಿಮೀ ನಂತರದ ಪ್ರತಿ ಕಿ.ಮೀಗೆ | |

ಟೆಂಡರ್ ಪ್ರಕಟನೆಯಲ್ಲಿ ತಿಳಿಸಿರುವ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಅರ್ಜಿ ಸಲ್ಲಿಸಿರುತ್ತೇನೆ. ಟೆಂಡರನ್ನು ಒಪ್ಪುವುದು/ ತಿರಸ್ಕರಿಸುವುದು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಬಿಟ್ಟಿದ್ದು ಎಂಬುದನ್ನು ತಿಳಿದುಕೊಂಡಿರುತ್ತೇನೆ ಹಾಗೂ ಪ್ರಾಧಿಕಾರದ ಅಂತಿಮ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ.

ಸ್ಥಳ :
ದಿನಾಂಕ:

ಟೆಂಡರ್‌ದಾರರ ಸಹಿ